# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –153 ಜಯನಗರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜಯನಗರ ವಾರ್ಡ್–153 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:04/07/2022 ಸೋಮವಾರದಂದು ಮಧ್ಯಾಹ್ನ 1.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷ್ಮಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ನವೀನ್‌ಕುಮಾರ್ ಕೆ. ಕಾರ್ಯದರ್ಶಿ.
3. ಶ್ರೀ. ಜಿ. ಮೂರ್ತಿ, ಸಹಾಯಕ ಅಭಿಯಂತರರು (ವಿದ್ಯುತ್)
4. ಶ್ರೀಮತಿ. ಶ್ರೀಜಾ, ಸಹಾಯಕ ಅಭಿಯಂತರರು, BWSSB.
5. ಶ್ರೀ. ಕಾರ್ತಿಕ್ ಹೆಚ್.ಎಂ, ಮಾರ್ಷಲ್ ವಾರ್ಡ್–153.
6. ಶ್ರೀ. ರವೀಂದ್ರ ಹಿಚೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
7. ಶ್ರೀ. ಶಿವಕುಮಾರ ವಿ. ಹೆಡ್ ಕಾನ್ಸ್ಟೇಬಲ್, ಸಿದ್ದಾಪುರ ಪೊಲೀಸ್ ಠಾಣೆ.
8. ಶ್ರೀ. ಎಂ.ಐ ಹುಸೇನ್, ಎ.ಎಸ್.ಐ, ಮೈಕೋಲೇಔಟ್ ಸಂಚಾರ ಪೊಲೀಸ್ ಠಾಣೆ.
9. ಶ್ರೀ. ಬಾಲಾಜಿ ನಾಯಕ್ ಎಲ್.ಕೆ, ಹೆಡ್ ಕಾನ್ಸ್ಟೇಬಲ್, ಮೈಕೋಲೇಔಟ್ ಸಂಚಾರ ಪೊಲೀಸ್ ಠಾಣೆ
10. ಶ್ರೀ. ಜಿ.ಟಿ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು ವಾರ್ಡ್–153
11. ಶ್ರೀ. ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್–153.
12. ಶ್ರೀ. ಅನೀಸ್ ಅಹಮದ್, ಶ್ರೀ. ಬಹದ್ದೂರ್, ಶ್ರೀ. ಫಜಲ್ ಖಾನ್, ಶ್ರೀ. ಜಯಕೃಷ್ಣನ್, ಶ್ರೀ.ಸಮೀಯುಲ್ಲಾ, ಶ್ರೀ. ಖಾನ್ ಅಹಮದ್, ಶ್ರೀ. ಭೀಮಪ್ಪ ಮತ್ತು (ಸಾರ್ವಜನಿಕರು).

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಅರಣ್ಯ ಇಲಾಖೆಯ ಅಧಿಕಾರಿಗಳು.
2. ಪೊಲೀಸ್ ಇನ್ಸ್‌ಪೆಕ್ಟರ್ ಬಸವನಗುಡಿ ಸಂಚಾರ ಪೊಲೀಸ್ ಠಾಣೆ.
3. ಪೊಲೀಸ್ ಇನ್ಸ್‌ಪೆಕ್ಟರ್, ಸಿದ್ದಾಪುರ, ತಿಲಕ್‌ನಗರ ಮತ್ತು ಬಸವನಗುಡಿ ಕಾನೂನು ಸುವ್ಯವಸ್ಥೆ.

*********



Scanned with CamScanner

1. ವಾರ್ಡ್-153 ರ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:04/07/2022 ಸೋಮವಾರದಂದು ಮಧ್ಯಾಹ್ನ 1.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡ ಕ್ರಮಗಳ ಕುರಿತು ಕಳೆದ ಸಭೆಯ ನಡವಳಿಗಳನ್ನು ಓದುವಂತೆ ವಾರ್ಡ್ ಅಭಿಯಂತರರಿಗೆ ತಿಳಿಸಿದರು. ಅದರಂತೆ ವಾರ್ಡ್ ಅಭಿಯಂತರರು ಡೆಂಗ್ಯೂ ಜ್ವರದ ಕುರಿತು ಮುಂಜಾಗ್ರತ ಕ್ರಮ ಕೈಗೊಂಡು ವರದಿ ಸಲ್ಲಿಸುವ ಬಗ್ಗೆ ಹಿಂದಿನ ಸಭೆಯಲ್ಲಿ ನಡೆದ ನಡವಳಿಯ ಕುರಿತು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೈಗೊಂಡ ಕ್ರಮದ ಕುರಿತು ಕೇಳಿದರು. ಈ ಕುರಿತು ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಆರ್.ಬಿ.ಐ ಕಾಲೋನಿ, ಗುಲ್ಬರ್ಗ ಕಾಲೋನಿ ಮತ್ತು ಎಸ್.ಎಸ್.ಎಲ್.ಸಿ ಪರೀಕ್ಷಾ ಕೇಂದ್ರಗಳಿಗೆ ಔಷಧಿಯನ್ನು ಸಿಂಪಡಿಸಲಾಗಿರುತ್ತದೆ. ಮತ್ತು ಲಿಂಕ್ ವರ್ಕರ್ ಮುಖಾಂತರ ಮನೆಮನೆಗೆ ತೆರಳಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ನಂತರ ನೋಡಲ್ ಅಧಿಕಾರಿಯವರು ಮಾತನಾಡಿ ಕಸದ ಆಟೋಗಳಲ್ಲಿ ಧ್ವನಿವರ್ಧಕಗಳ ಮೂಲಕ ಪ್ರಚಾರವನ್ನು ಸಹ ಮಾಡುವಂತೆ ತಿಳಿಸಿದರು.

ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು & ಆರೋಗ್ಯ ವೈದ್ಯಾಧಿಕಾರಿಗಳು

3. ನೋಡಲ್ ಅಧಿಕಾರಿಯವರು ಮಾತನಾಡಿ ಕಳೆದ ಸಭೆಯಲ್ಲಿ ಚರ್ಚಿಸಿದಂತೆ ಸ್ಟ್ರೀಟ್ ಲೈಟ್‌ಗಳ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ತಿಳಿಸುವಂತೆ ಸಹಾಯಕ ಅಭಿಯಂತರರು ವಿದ್ಯುತ್ ರವರಿಗೆ ಕೇಳಿದರು. ಈ ಬಗ್ಗೆ ಸದರಿಯವರು ಮಾತನಾಡಿ ಚಿಕನ್ ಕೌಂಟಿ ಬಳಿ 06 ರಾಜಣ್ಣ ಲೇಔಟ್ ಸುತ್ತಮುತ್ತ 10, ಬಿಟಿಬಿ ಏರಿಯಾ ಸುತ್ತಮುತ್ತ 07 ಸ್ಟ್ರೀಟ್ ಲೈಟ್‌ಗಳನ್ನು ಅಳವಡಿಸಲಾಗಿದೆ ಎಂದು ತಿಳಿಸಿದರು. ನಂತರ ಸಾರ್ವಜನಿಕರಾದ ಶ್ರೀ. ಅನೀಸ್ ಅಹಮದ್ ರವರು ಮಾತನಾಡಿ ಎಸ್.ಆರ್.ಕೆ ಗಾರ್ಡನ್ ಮತ್ತು ಬಿ.ಹೆಚ್.ಇ.ಎಲ್ ಲೇಔಟ್ ಸುತ್ತಮುತ್ತ ಇನ್ನೂ 15 ಸ್ಟ್ರೀಟ್ ಲೈಟ್‌ಗಳ ಅವಶ್ಯಕತೆ ಇದ್ದು ಹಾಕಿಸಿಕೊಡಬೇಕೆಂದು ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಹಾಯಕ ಅಭಿಯಂತರರು ವಿದ್ಯುತ್ ರವರಿಗೆ ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು ಹಾಗೂ ತೆಗೆದುಕೊಂಡ ಕ್ರಮದ ಕುರಿತು ಫೋಟೋಗಳನ್ನು ಗ್ರೂಪ್‌ನಲ್ಲಿ ಅಪ್‌ಡೇಟ್ ಮಾಡಬೇಕೆಂದು ಸಹ ತಿಳಿಸಿದರು.

ಕ್ರಮ: ಸಹಾಯಕ ಅಭಿಯಂತರರು ವಿದ್ಯುತ್ (ದಕ್ಷಿಣ)



Scanned with CamScanner

4. ವಾರ್ಡ್ ಅಭಿಯಂತರರು ನಡವಳಿಗಳ ಮುಂದಿನ ಭಾಗದ ಕುರಿತು ಮಾತನಾಡಿ ಕಳೆದ ಸಭೆಯಲ್ಲಿ ಬನ್ನೇರುಘಟ್ಟ ರಸ್ತೆ ಚಿಕನ್‌ಕಾಂಟ ಬಳಿ ಪೆಟ್ಟಿ ಅಂಗಡಿಯಲ್ಲಿ ಸಿಗರೇಟ್ ಮಾರುತ್ತಿದ್ದು, ಇದರಿಂದ ಸದರಿ ಜಾಗದಲ್ಲಿ ಪಾರ್ಕಿಂಗ್ ಸಮಸ್ಯೆ ಉಂಟಾಗುತ್ತಿದ್ದು ಆಗಾಗಿ ಸದರಿ ಪೆಟ್ಟಿ ಅಂಗಡಿಯನ್ನು ತೆರವುಗೊಳಿಸುವಂತೆ ಶ್ರೀ. ಫಜಲ್‌ಖಾನ್ ರವರು ಕಳೆದ ಸಭೆಯಲ್ಲಿ ಕೋರಿರುತ್ತಾರೆ ಎಂದು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕ್ರಮ ಕೈಗೊಂಡ ಕುರಿತು ವಿಚಾರಿಸಿದರು. ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ನಾಳೆಯೇ ಸದರಿ ಪೆಟ್ಟಿ ಅಂಗಡಿಯನ್ನು ತೆರವುಗೊಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

**ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು**

5. ವಾರ್ಡ್ ಅಭಿಯಂತರರು ನಡವಳಿಗಳ ಮುಂದಿನ ಭಾಗದ ಕುರಿತು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್ ಮುಖ್ಯರಸ್ತೆಯ ಮೋರಿಯಿಂದ ತೆಗೆದಿರುವ ಡೆಬ್ರಿಸ್‌ನ್ನು ತೆರವುಗೊಳಿಸುವಂತೆ ಕಳೆದ ಸಭೆಯಲ್ಲಿ ಶ್ರೀ. ಜಯಕೃಷ್ಣ ರವರು ಕೋರಿರುವುದಾಗಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಕೈಗೊಂಡ ಕ್ರಮದ ಬಗ್ಗೆ ವಾರ್ಡ್ ಅಭಿಯಂತರರನ್ನು ವಿಚಾರಿಸಲಾಗಿ ವಾರ್ಡ್ ಅಭಿಯಂತರರು ಈ ವಾರದೊಳಗೆ ಸದರಿ ಡೆಬ್ರಿಸ್‌ನ್ನು ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿದರು. ಮುಂದುವರೆದಂತೆ ಶ್ರೀ. ಅನೀಸ್ ಅಹಮದ್ ರವರು ಮಾತನಾಡಿ 2ನೇ ಮುಖ್ಯರಸ್ತೆ, ಎಸ್.ಆರ್.ಕೆ ಗಾರ್ಡನ್ ನಲ್ಲಿ ಹೊಸದಾಗಿ ಡಾಂಬರೀಕರಣ ಮಾಡಿದ್ದು, ಈ ಸಮಯದಲ್ಲಿ ರಸ್ತೆ ಸ್ವಚ್ಛಗೊಳಿಸಿದ ಡೆಬ್ರಿಸ್‌ನ್ನು ಫುಟ್‌ಪಾತ್ ಮೇಲೆ ಹಾಕಿದ್ದು, ಸದರಿ ಡೆಬ್ರಿಸ್‌ನ್ನು ತೆರವುಗೊಳಿಸಲು ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ: ವಾರ್ಡ್ ಅಭಿಯಂತರರು**

6. ವಾರ್ಡ್ 153ರ ಸ್ಥಳೀಯರಾದ ಶ್ರೀ. ಫಜಲ್‌ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್ ಸುತ್ತಮುತ್ತ ಬೀದಿನಾಯಿಗಳ ಹಾವಳಿ ಹೆಚ್ಚಾಗಿದ್ದು, ಇವುಗಳಿಗೆ ಸಂತಾನಹರಣ ಶಸ್ತ್ರಚಿಕಿತ್ಸೆ ಮಾಡುವಂತೆ ಕೋರಿದರು ನಂತರ ಶ್ರೀ. ಅನೀಸ್ ಅಹಮದ್ ರವರು ಮಾತನಾಡಿ ಎಸ್.ಆರ್.ಕೆ ಗಾರ್ಡನ್ ಸುತ್ತಮುತ್ತಲೂ ಸಹ ಬೀದಿನಾಯಿಗಳ ಹಾವಳಿ ಜಾಸ್ತಿ ಇರುತ್ತದೆ ಹಾಗೂ ಬೇರೆ ಜಾಗದಲ್ಲಿ ಇರುವ ನಾಯಿಗಳನ್ನು ತಂದು ಹಾಕುತ್ತಿರುತ್ತಾರೆ ಎಂದು ತಿಳಿಸಿದರು. ನಂತರ ಶ್ರೀಮತಿ. ಶಾನ್ ರವರು ಮಾತನಾಡಿ ಎಂ.ಡಿ. ಬ್ಲಾಕ್ ಬಸವನಗುಡಿ ಸುತ್ತಮುತ್ತಲೂ ಸಹ ನಾಯಿಗಳ ಹಾವಳಿ ಜಾಸ್ತಿ ಇದ್ದು, ಕ್ರಮ ಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ನಾಯಿಗಳ ಹಾವಳಿ ಕುರಿತು ಒಂದು ಮನವಿಯನ್ನು ಸಲ್ಲಿಸಿದ್ದಲ್ಲಿ ಸಂಬಂಧಪಟ್ಟ ಪಶುಪಾಲನಾ ಇಲಾಖೆಗೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು



Scanned with CamScanner

7. ವಾರ್ಡ್ 153ರ ಸ್ಥಳೀಯರಾದ ಫಜಲ್‌ಖಾನ್ ರವರು ಮಾತನಾಡಿ ಬಿ.ಹೆಚ್.ಇ.ಎಲ್ ಲೇಔಟ್ ಫ್ಯಾಮಿಲಿ ಮಾರ್ಟ್ ಎದುರಿನ ಫುಟ್‌ಪಾತ್‌ನಲ್ಲಿ ಅನಧಿಕೃತವಾಗಿ ಸ್ಕ್ರಾಪ್ ಐಟಂಗಳನ್ನು ಇಟ್ಟಿರುತ್ತಾರೆ. ಇದರಿಂದ ಪಕ್ಕದ ಮನೆಯವರಿಗೆ ತೊಂದರೆ ಉಂಟಾಗುತ್ತಿದ್ದು, ಸದರಿ ಸ್ಕ್ರಾಪ್ ಐಟಂಗಳನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಈ ವಾರದಲ್ಲಿ ಉಪವಿಭಾಗದ ವತಿಯಿಂದ ಸಾಮೂಹಿ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಅನಧಿಕೃತವಾಗಿ ಇಟ್ಟಿರುವ ಸ್ಕ್ರಾಪ್ ಐಟಂಗಳನ್ನು ತೆರವುಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ಕ್ರಮ : ವಾರ್ಡ್ ಅಭಿಯಂತರರು

8. ವಾರ್ಡ್ 153ರ ಸ್ಥಳೀಯರಾದ ಶ್ರೀ. ಭೀಮಪ್ಪ ರವರು ಮಾತನಾಡಿ ಗುಲ್ಬರ್ಗ ಕಾಲೋನಿಯಲ್ಲಿ ಬ್ಲಾಕ್ ಆಗಿದ್ದ ಮೋರಿಯನ್ನು ವಾರ್ಡ್ ಅಭಿಯಂತರರು ತೆರವುಗೊಳಿಸಿರುತ್ತಾರೆ. ಮುಂದೆ ಗುಲ್ಬರ್ಗ ಕಾಲೋನಿಯ ಎಲ್ಲಾ ಮೋರಿಗಳಲ್ಲಿ ಇರುವ ಡೆಬ್ರಿಸ್‌ನ್ನು ತೆರವುಗೊಳಿಸುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಮುಂದಿನ ವಾರ್ಡ್ ಕಾರ್ಯಕ್ರಮ ಪಟ್ಟಿಯಲ್ಲಿ ಗುಲ್ಬರ್ಗ ಕಾಲೋನಿಯ ಮೋರಿಗಳಲ್ಲಿ ಇರುವ ಡೆಬ್ರಿಸ್‌ನ್ನು ತೆರವುಗೊಳಿಸುವ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು. ನಂತ ಭೀಮಪ್ಪ ರವರು ಮಾತನಾಡಿ ಗುಲ್ಬರ್ಗ ಕಾಲೋನಿಯಲ್ಲಿ ಭಾಗಿರುವ ವಿದ್ಯುತ್ ಕಂಬವನ್ನು ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಕೋರಿದ್ದು, ಈ ತಹಲ್‌ವರೆವಿಗೂ ಸರಿಪಡಿಸಿರುವುದಿಲ್ಲ ಎಂದು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಸಭೆಯಲ್ಲಿ ಹಾಜರಿರದ ಬೆಸ್ಕಾಂ ಇಂಜಿನಿಯರ್ ಶ್ರೀ. ಪ್ರಕಾಶ್ ರವರಿಗೆ ದೂರವಾಣಿ ಕರೆ ಮಾಡಿ ಪ್ರಸ್ತಾಪಿತ ಸ್ಥಳಕ್ಕೆ ತೆರಳಿ ಸಮಸ್ಯೆ ಬಗೆಹರಿಸುವಂತೆ ತಿಳಿಸಿದರು. ಈ ಬಗ್ಗೆ ಪ್ರಕಾಶ್‌ರವರು ಸದರಿ ಸ್ಥಳಕ್ಕೆ ತೆರಳುವುದಾಗಿ ತಿಳಿಸಿದರು.

ಕ್ರಮ : ಸ.ಕಾ.ನಿ.ಅ (ಬೆಸ್ಕಾಂ) ಜಯನಗರ

9. ವಾರ್ಡ್ 153ರ ಸ್ಥಳೀಯರಾದ ಶ್ರೀ. ಸಮೀಹುಲ್ಲಾ ರವರು ಮಾತನಾಡಿ 1ನೇ ಅಡ್ಡರಸ್ತೆ ರೋಷನ್ ಕಾಲೋನಿ ಬಳಿ ಟೀ ಅಂಗಡಿ ಇದ್ದು, ಸದರಿ ಟೀ ಅಂಗಡಿಗೆ ಸಿಗರೇಟ್ ಸೇದಲು ವಾಹನಗಳನ್ನು ರಸ್ತೆಯಲ್ಲಿ ನಿಲ್ಲಿಸುವುದರಿಂದ ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುತ್ತದೆ. ಆದ್ದರಿಂದ ಇದನ್ನು ಸರಿಪಡಿಸುವಂತೆ ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಮೈಕೋಲೇಔಟ್ ಸಂಚಾರ ಪೊಲೀಸ್ ಸಹಾಯಕ ಸಬ್ ಇನ್ಸ್‌ಪೆಕ್ಟರ್ ರವರು ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕ್ರಮ : ಪೊಲೀಸ್ ಇನ್ಸ್‌ಪೆಕ್ಟರ್ ಮೈಕೋ ಲೇಔಟ್ ಸಂಚಾರ ಪೊಲೀಸ್ ಠಾಣೆ



Scanned with CamScanner

10. ವಾರ್ಡ್ 153ರ ಸ್ಥಳೀಯರಾದ ಶ್ರೀಮತಿ. ಶಾನ್ ರವರು ಮಾತನಾಡಿ ಎಂ.ಡಿ ಬ್ಲಾಕ್ ಬಸವನಗುಡಿ ಸುತ್ತಮುತ್ತ ಬಿಡಾಡಿ ವಾಹನಗಳು ಹೆಚ್ಚಿದ್ದು, ಇವುಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಕೋರಿದರು. ಈ ಬಗ್ಗೆ ವಾರ್ಡ್ ಅಭಿಯಂತರರು ಮಾತನಾಡಿ ಪ್ರಸ್ತಾಪಿತ ಬಿಡಾಡಿ ವಾಹನಗಳ ಕುರಿತು ಸಂಚಾರ ಪೋಲೀಸರು ಮತ್ತು ಪಾಲಿಕೆಯ ಅಧಿಕಾರಿಗಳು ಜಂಟಿ ತಪಾಸಣೆ ಕೈಗೊಂಡು ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಈ ಬಗ್ಗೆ ಸಂಚಾರ ಪೋಲೀಸರೊಂದಿಗೆ ಮಾತನಾಡಿ ಮುಂದಿನ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.

ಕ್ರಮ : ಸಂಚಾರ ಪೋಲೀಸ್ ಬಸವನಗುಡಿ ಮತ್ತು ವಾರ್ಡ್ ಅಭಿಯಂತರರು

11. ವಾರ್ಡ್ 153ರ ಸ್ಥಳೀಯರಾದ ಶ್ರೀಮತಿ. ಶಾನ್ ರವರು ಮಾತನಾಡಿ ಕಸ ತೆಗೆಯುವ ಆಟೋಗಳು ಸರಿಯಾಗಿ ಬರುತ್ತಿಲ್ಲವೆಂದು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು

ಕ್ರಮ : ಕಿರಿಯ ಆರೋಗ್ಯ ಪರಿವೀಕ್ಷಕರು

12. ವಾರ್ಡ್ 153ರ ಸ್ಥಳೀಯರಾದ ಶ್ರೀಮತಿ. ಶಾನ್ ರವರು ಮಾತನಾಡಿ ಪಾಲಿಕೆಯ ಅರಣ್ಯ ಇಲಾಖೆಯವರು ದೂರು ನೀಡಿದ ತಕ್ಷಣ ಒಣಗಿದ ಮರವನ್ನು ತೆರವುಗೊಳಿಸಿ ಜರೂರಾಗಿ ದೂರನ್ನು ಪರಿಹರಿಸಿರುತ್ತಾರೆ. ಇದರ ಬಗ್ಗೆ ಅಭಿನಂದನೆ ಮತ್ತು ಹೆಮ್ಮೆಯನ್ನು ವ್ಯಕ್ತಪಡಿಸಿದರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ಪ್ರವೀಣ್‌ಕುಮಾರ್ ಕೆ.)
ಕಾರ್ಯದರ್ಶಿ
ವಾರ್ಡ್-153 ಜಯನಗರ

(ವರಲಕ್ಷ್ಮಿ ಎಲ್)
ನೋಡಲ್ ಅಧಿಕಾರಿ
ವಾರ್ಡ್-153 ಜಯನಗರ



Scanned with CamScanner